
ಸಂವೇದನೆ ಬೇರಾರಿಗೂ ಇರಲು ಸಾಧ್ಯವಿರಲಿಲ್ಲ. ಹೀಗಾಗಿಯೇ ಅವರು ಸತತವಾಗಿ 'ಒಂದು ವ್ಯಕ್ತಿಗೆ ಒಂದು ಮತ' ಎನ್ನುವ ಮಾತಿಗೆ ನಿಲ್ಲದೇ, ಒಂದು ವ್ಯಕ್ತಿ ಮತ್ತು ಆ ವ್ಯಕ್ತಿಯ ಮತಕ್ಕೆ ಸಮಾನ ಮೌಲ್ಯದ ಬಗ್ಗೆಯೂ ಮಾತಾಡುತ್ತಿದ್ದರು. ರಾಜಕೀಯ (ಮತ ಚಲಾಯಿಸುವ, ಪ್ರಾತಿನಿಧ್ಯದ ಜವಾಬ್ದಾರಿಯನ್ನು ನಿರ್ವಹಿಸುವ); ಸಾಮಾಜಿಕ (ಜಾತಿ-ಧರ್ಮದ ತಾರತಮ್ಯವನ್ನು ಮೀರುವ); ವಿತ್ತೀಯ (ಎಲ್ಲ ಹಣಕಾಸಿನ ಸವಲತ್ತುಗಳೂ ಉಂಟುಮಾಡುವ): ಆರ್ಥಿಕ (ವ್ಯವಸ್ಥೆಯಲ್ಲಿ ಸಮಾನ ಉದ್ಯೋಗ ಮತ್ತು ವ್ಯಾಪಾರ-ಅವಕಾಶಗಳನ್ನು ಪಡೆಯುವ); ಸಮಗ್ರ ರೀತಿಯ ಒಳಗೊಳ್ಳುವಿಕೆಯನ್ನು ಅಂಬೇಡ್ಕರ್ ಪ್ರತಿಪಾದಿಸುತ್ತಿದ್ದರು. ಸಂವಿಧಾನದ ಸಂರಚನೆಯ ಹಿನ್ನೆಲೆಯಲ್ಲಿ ಈ ವಿಸ್ತೃತ ಆಶಯ ಅವರಲ್ಲಿತ್ತು.

ಅವರ ಓದು, ಅರ್ಥಶಾಸ್ತ್ರ, ಸಂಸ್ಕೃತ, ಕಾನೂನಿನಲ್ಲಿ ಅವರು ಪಡೆದ ತರಬೇತಿ ಅವರನ್ನು ಸಂತುಲಿತ ಪಂಡಿತರನ್ನಾಗಿ ತಯಾರು ಮಾಡಿತ್ತು. ಅಮೆರಿಕದ ಕೊಲಂಬಿಯಾ, ಬ್ರಿಟನ್ನಿನ ಲಂಡನ್ ಸ್ಕೂಲ್, ಗ್ರೇಸ್ ಇನ್‌ಗಳಲ್ಲಿ ಮಾಡಿದ ಅಭ್ಯಾಸದಿಂದಾಗಿ ವಿವಿಧ ದೇಶಗಳ ಅರ್ಥಪದ್ಧತಿ, ಕಾನೂನಿನ ಪದ್ಧತಿ, ಸಂವಿಧಾನದ ಸಂರಚನೆ ಮತ್ತು ಅನುಷ್ಠಾನದ ಬಗ್ಗೆ ವಿಸ್ತಾರವಾದ ಜ್ಞಾನವಿತ್ತು. ಹೀಗಾಗಿ ನಮ್ಮ ದೇಶದ ಸಂವಿಧಾನ ಸಭೆಯ ಅಧ್ಯಕ್ಷತೆಯನ್ನು ಬಾಬಾಸಾಹೇಬರು ವಹಿಸಿದ್ದು ನಮ್ಮ ಭಾಗ್ಯವೆಂದೇ ಪರಿಗಣಿಸಬೇಕು. ಸಂವಿಧಾನದ ಚರ್ಚೆ ಬಿಸಿಯಾಗುತ್ತಿರುವ ಈ ಸಂದರ್ಭದಲ್ಲಿ ಅದರ ಸಂರಚನೆಯ ಪ್ರಕ್ರಿಯೆಯನ್ನು, ಅದರಲ್ಲಿರುವ ಹೂರಣದ ತರ್ಕವನ್ನೂ ನಾವು ಅರ್ಥಮಾಡಿಕೊಳ್ಳುವುದು ಒಳ್ಳೆಯದೇ.

ಸಂವಿಧಾನ ಸಭೆ ಏರ್ಪಾಡಾಗುವುದಕ್ಕೆ ಮೊದಲೇ ಬಾಬಾಸಾಹೇಬ್ ಸಂವಿಧಾನದ ಬಗ್ಗೆ ಮತ್ತು ಬಹುಸಂಖ್ಯಾತರ ದಬ್ಬಾಳಿಕೆಯನ್ನು ಹದ್ದುಬಸ್ತಿನಲ್ಲಿಡುವ ಬಗ್ಗೆ ವಿಸ್ತೃತವಾಗಿ ಯೋಚಿಸಿದ್ದರಲ್ಲದೇ, ಆ ವಿಷಯದಲ್ಲಿ ಸಂತುಲನ ತರಲು ಅನೇಕ ಪ್ರಸ್ತಾವನೆಗಳನ್ನೂ ಮಂಡಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಸಂವಿಧಾನ ಸಭೆ ಏರ್ಪಾಟಾಯಿತಾದರೂ, ಭಾರತವನ್ನು ಹೇಗೆ ಆಳಬೇಕು, ಅದರಲ್ಲಿ ಪ್ರಜಾತಾಂತ್ರಿಕ ಸೂತ್ರಗಳನುಸಾರ




ಯಾವ ರೀತಿಯ ಪ್ರಾತಿನಿಧ್ಯ ಕೊಡಬೇಕು ಎನ್ನುವುದರ ಬಗ್ಗೆ ನಿರಂತರ ಚರ್ಚೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿರುವವರ ನಡುವೆ, ಹಾಗೂ ನಮ್ಮನ್ನಾಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯದೊಡನೆ ನಿರಂತರವಾಗಿ ನಡೆಯುತ್ತಿತ್ತು. ಈ ಎಲ್ಲ ಚರ್ಚೆಗಳಲ್ಲಿ ಮತ್ತು ಜನಪ್ರಾತಿನಿಧ್ಯವನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಬಾಬಾಸಾಹೇಬ್ ನಿಯಮಿತವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ದುಂಡು ಮೇಜಿನ ಎಲ್ಲ ಸಭೆಗಳಲ್ಲೂ ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದರು. ಭಾರತದ ಮಹಾಜನತೆಗೆ ಯಾವ ರೀತಿಯ ಪ್ರಾತಿನಿಧ್ಯವಿರಬೇಕು ಎನ್ನುವುದರ ಬಗ್ಗೆ ಬಾಬಾಸಾಹೇಬರಿಗೆ ಸ್ಪಷ್ಟ ವಿಚಾರಗಳೂ, ನಿಲುವುಗಳೂ ಇದ್ದುವು.

ಉದಾಹರಣೆಗೆ, 1945ರಲ್ಲಿಯೇ ಬಾಬಾಸಾಹೇಬ್ 'ಕೋಮುಗಳ ಜಟಿಲ ಗಂಟು ಮತ್ತು ಅದನ್ನು ಬಿಡಿಸುವ ಪರಿ' ಎನ್ನುವ ಕೃತಿಯನ್ನು ಬರೆದಿದ್ದರು. ಒಂದು ಸಮುದಾಯ, ಧರ್ಮ, ಜಾತಿಯ ಸಂಖ್ಯಾಬಲದಿಂದ ಬಹುಮತವನ್ನು ಪಡೆದು ನಡೆಸಬಹುದಾದ